ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)91–(357)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ)ಕೊಳಚೆ ನಿರ್ಮೂಲನ ಮಂಡಳಿಯಿಂದ ಐ.ಹೆಚ್.ಡಿ.ಎಫ್. ಯೋಜನೆಯಲ್ಲಿ ರಾಜ್ಯಾದ್ಯಾಂತ ಕೈಗೆತ್ತಿಕೊಂಡಿರುವ ಯೋಜನೆಗಳಾವುವು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಯೋಜನೆಗೆ ರಾಜ್ಯ ಸರ್ಕಾರ ಆಯವ್ಯಯದಲ್ಲಿ ನಿಗದಿಪಡಿಸಿದ ಮೊತ್ತವೆಷ್ಟು? ಹಾಗೂ ಇಲ್ಲಿಯವರೆಗೂ ಖರ್ಚಾದ ಮೊತ್ತವೆಷ್ಟು?

ಇ)ಕೇಂದ್ರ ಸರ್ಕಾರದ ಈ ಯೋಜನೆಗೆ ರಾಜ್ಯ ಸರ್ಕಾರದಿಂದ ಈ ವರ್ಷ ಆಯವ್ಯಯದಲ್ಲಿ ಹೆಚ್ಚಿಗೆ ಅನುದಾನ ನಿಗದಿಪಡಿಸಿ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಅನುದಾನವನ್ನು ಪಡೆಯಲು ಉದ್ದೇಶ ಸರ್ಕಾರಕ್ಕೆ ಇದೆಯಾ?

ಶ್ರೀ ಡಿ.ಟಿ.ಜಯಕುಮಾರ್

ಅ) ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ IHSDP ಯೋಜನೆಯಡಿ ರಾಜ್ಯಾದ್ಯಾಂತ ಕೈಗೆತ್ತಿಕೊಂಡಿರುವ ಯೋಜನೆಗಳ ವಿವರ ಕೆಳಗಿನಂತಿದೆ:

ಜಿಲ್ಲೆ	ತಾಲ್ಲೂಕು	ಮನೆಗಳ ಸಂಖ್ಯೆ	ಮನೆಗಳ ಮತ್ತು ಮೂಲಭೂತ ಸೌಲಭ್ಯಗಳ ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
ಕೋಲಾರ	ಮುಳಬಾಗಿಲು	600	10.42
ಬೆಂಗಳೂರು	ರಾಮನಗರ	1800	27.16
	ದೊಡ್ಡಬಳ್ಳಾಪುರ	648	8.99

ಮೈಸೂರು	ನಂಜನಗೂಡು	540	6.91
ಮಂಡ್ಯ	ನಾಗಮಂಗಲ	420	5.89
ಹಾಸನ	ಹಾಸನ	1000	12.90
	ಹೋಳೆನರಸೀಪುರ	1000	12.90
ಬಳ್ಳಾರಿ	ಬಳ್ಳಾರಿ	520	8.66
ರಾಯಚೂರು	ಸಿಂಧನೂರು	1005	19.66
ಬೀದರ್	ಬಸವಕಲ್ಯಾಣ	170	2.46
ಗದಗ್	ಗಜೇಂದ್ರಘಡ	500	6.42
ಬೆಳಗಾವಿ	ಸವದತ್ತಿ	145	2.56
	ಒಟ್ಟು	**8348**	**124.3**

ಆ) ಈ ಯೋಜನೆಗೆ ರಾಜ್ಯ ಆಯವ್ಯಯದಲ್ಲಿ ರೂ.20.80 ಕೋಟಿಗಳನ್ನು 2007–08ನೇ ಸಾಲಿನಲ್ಲಿ ಒದಗಿಸಲಾಗಿದೆ. ಮಂಜೂರಾದ ಪಟ್ಟಣಗಳಿಗೆ ಟೆಂಡರ್ ಕರೆದಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಹೆಚ್ಚಿನ ಯೋಜನೆಗಳನ್ನು ಯೋಜನೆಯಡಿಯಲ್ಲಿ ತಯಾರು ಮಾಡಿ, ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಮಂಜೂರಾತಿ ದೊರೆತ ನಂತರ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಅನುದಾನ ದೊರೆತಂತಾಗುತ್ತದೆ.